(ಗೊಂದಲ)

(2) ವಿಷಯ : ಶಾಸಕರ ಭವನದಲ್ಲಿ ಶಾಸಕರ ಕೊಠಡಿಗಳು ಮತ್ತು ಕಾರ್ ಪಾರ್ಕಿಂಗ್ ಕಟ್ಟಡ ನಿರ್ಮಾಣ ಕಾಮಗಾರಿ ಮುಂದುವರೆಸುವ ಬಗ್ಗೆ.

ಶ್ರೀ ಅಪ್ಪಚ್ಚು ರಂಜನ್ (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇವತ್ತು ನಮ್ಮ ಶಾಸಕರ ಭವನದಲ್ಲಿ ಸುಮಾರು ಜನ ಶಾಸಕರು ಇವತ್ತೂ ಕೂಡ Hotel ಗಳಲ್ಲಿ halt ಮಾಡುತ್ತಿದ್ದಾರೆ. ಸುಮಾರು ಒಂದು ತಿಂಗಳಿಗೆ 90 ಸಾವಿರ ರೂ.ಗಳ ಬಿಲ್ ಕೊಡುವಂತಹ ಶಾಸಕರೂ ಕೂಡ ಇದ್ದಾರೆ. ಶಾಸಕರ ಭವನದಲ್ಲಿ ಸರಿಯಾದ ರೂಂನ facilities ಇಲ್ಲ. ಅದರ ಜೊತೆಗೆ ನೀರು leakage ಆಗುತ್ತಿದೆ. ಈ ರೀತಿ ಹಲವಾರು ಶಾಸಕರು ಯಾರೂ ಕೂಡ ಶಾಸಕರ ಭವನದಲ್ಲಿ halt ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ತಾವುಗಳೆಲ್ಲರೂ ಕೂಡ, ತಾವು ಮತ್ತು ಮಾನ್ಯ ಸಭಾತಿಯವರು ಮೊನ್ನೆ ಒಂದು ಶಂಕು ಸ್ಥಾಪನೆಯನ್ನು ಮಾಡಿದ್ದೀರಿ. ಸುಮಾರು 50 ರೂಂಗಳನ್ನು ಕಟ್ಟುವುದಕ್ಕೆ ಮತ್ತು Car Parking ಗೋಸ್ಕರ ಅದನ್ನು ಮಾಡಿದ್ದೀರಿ. ಅದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ಮೇಲ್ಮನೆಯಲ್ಲಿರುವ 75 ಜನ ಸದಸ್ಯರಿಗೆ sufficient ಆಗಿ ಸರಿಯಾದ ರೂಮ್‌ನ facilities ಇದೆ. ಅವರಿಗೆ Car ನ facilities ಕೂಡ ಚೆನ್ನಾಗಿದೆ. ಆದರೆ ನಾವು 225 ಜನ ಶಾಸಕರಿದ್ದೇವೆ. ಶಾಸಕರು ನೆಮ್ಮದಿಯಿಂದ ಮಲಗಲಿಕ್ಕೆ ಆಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ, ಈ ಬಗ್ಗೆ ಚರ್ಚೆ ಮಾಡಿ, ಇದನ್ನು ಮಾಡುವುದು ಬೇಡ ಎಂದು ಹೇಳುವಂತಹ ಪರಿಸ್ಥಿತಿಗೆ Council ಬಂದಿದೆ ಎಂದರೆ, ಆ ಬಗ್ಗೆ ಬಹಳ ವಿಷಾದವನ್ನು ವ್ಯಕ್ತಪಡಿಸ ಬೇಕಾಗುತ್ತದೆ. ದಯವಿಟ್ಟು ನಾನು ಎಲ್ಲಾ ಶಾಸಕರ ಪರವಾಗಿ ವಿನಂತಿಸಿ ಕೊಳ್ಳುತ್ತೇನೆ. ಆ ಶಾಸಕರ ಭವನ ಆಗಬೇಕು. ಅದು ಬಹಳ ಸುಸಜ್ಜಿತವಾಗಿ ಆಗಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಈ ಬಗ್ಗೆ ಚರ್ಚೆ ಮಾಡದೇ ನಿರ್ಣಯವೊಂದನ್ನು ಮಾಡಬೇಕು.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : ಇದು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದರೆ ಇಲ್ಲಿ function ಮಾಡಿದ್ದಾರೆ. ಆ ಬಗ್ಗೆ ಯಾರೂ ನನಗೆ ಹೇಳಿಯೇ ಇಲ್ಲ.

(ಗೊಂದಲ)

ಅಧ್ಯಕ್ಷರು : ಇದು ನನ್ನ ಎಂದರೆ ಸಭಾಧ್ಯಕ್ಷರ ಅಧೀನದಲ್ಲಿರುವುದು.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ಈಗ ಇರುವ ಕೆಲವು ಶಾಸಕರಿಗೆ ಒಂದೇ ರೂಮ್ ಇದೆ. ಅವರ PA ಗಳು ಬಂದರೂ ಅದೇ ರೂಂನಲ್ಲಿ ಮಲಗಬೇಕಾಗುತ್ತದೆ, Driver ಗಳು ಬಂದರೂ ಅದೇ ರೂಂನಲ್ಲೇ ಮಲಗಬೇಕಾಗುತ್ತದೆ, ಅವರ Cook ಬಂದರೂ ಅಲ್ಲೇ ಮಲಗಬೇಕಾಗುತ್ತದೆ. ಆದ್ದರಿಂದ, ದಯವಿಟ್ಟು ಸುಸಜ್ಜಿತವಾದ ಎರಡು ರೂಂ, ಎರಡು ಬಾತ್‌ರೂಂ ...

(ಗೊಂದಲ)

ಅಧ್ಯಕ್ಷರು : ಆಯಿತು, ಈಗ ಸದನದ ಎಲ್ಲಾ ಶಾಸಕರ ಭಾವನೆಯನ್ನು ಬೆಂಬಲಿಸಿ, ಈ ಕಾಮಗಾರಿಯನ್ನು ಮುಂದುವರೆಸುತ್ತೇವೆ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಸಾರ್, ಒಂದು ನಿಮಿಷ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ನಾನು ಹೇಳಿ ಆಯಿತಲ್ಲಾ/ ಮತ್ತೆ ಮತ್ತೆ ಅದರ ಬಗ್ಗೆ ಏಕೆ ಹೇಳುತ್ತೀರಿ? ನಾನು ಈಗಾಗಲೇ ಕಾಮಗಾರಿ ಮುಂದುವರೆಯುತ್ತದೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಹೆಚ್. ಹಾಲಪ್ಪ : ... ಇದನ್ನು ಗಮನಿಸಬೇಕು. ದಯವಿಟ್ಟು ತಮ್ಮ ಬಗ್ಗೆ ಮತ್ತು ಶಾಸಕರೆಲ್ಲಾ ಸೇರಿ ಮತ್ತೇನೋ ಮಾಡಿಕೊಳ್ಳುತ್ತಾರೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಮಾಧ್ಯಮದಲ್ಲಿ ಮೇಲ್ಮನೆಯಲ್ಲಿ ನಡೆದ ಚರ್ಚೆ ವರದಿಯಾಗಿದೆ. ಈ ಸದನದ ಗೌರವ ಮತ್ತು ತಮ್ಮ ಗೌರವದ ಬಗ್ಗೆಯೇ ಪ್ರಶ್ನೆ ಮಾಡುವ ರೀತಿಯಲ್ಲಿ ಅನುಮಾನದಲ್ಲಿ ಜನ ನೋಡುವ ಹಾಗಾಗಿದೆ. ಅದಕ್ಕಾಗಿಯೇ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು.

ಅಧ್ಯಕ್ಷರು : ಚರ್ಚೆ ಬೇಡ, ಇದ್ದು ಮುಕ್ತಾಯ ಮಾಡೋಣ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಚರ್ಚೆ ಬೇಡದಿದ್ದರೆ ಪರವಾಗಿಲ್ಲ ಸಾರ್. ಆದರೆ ಈ ಸದನದಲ್ಲಿ ತೀರ್ಮಾನ ತೆಗೆದುಕೊಂಡು, ಮಾನ್ಯ ಮುಖ್ಯಮಂತ್ರಿಗಳು ಶಂಕು ಸ್ಥಾಪನೆ ಮಾಡುತ್ತಾರೆ. ಅದಕ್ಕೆ ವಿರೋಧ ಪಕ್ಷದ ನಾಯಕರು ವಿಧಾನ ಪರಿಷತ್ತಿನಿಂದ ಬಂದಿರುತ್ತಾರೆ. ಅಲ್ಲಿ ಹೋಗಿ ನಿಂತುಕೊಂಡು, ಇದನ್ನು ಕಟ್ಟುವುದು ತಪ್ಪು ಎಂದು ವಾದ ಮಾಡಿದರೆ ಹೇಗೆ? ಶಾಸಕರು ಎಲ್ಲಿ ಹೋಗಿ ಮಲಗಬೇಕು?

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : ಅದು ನನ್ನ ಕ್ಷೇತ್ರ. ನನಗೆ ಯಾರೂ inform ಮಾಡುವುದಿಲ್ಲ.

ಅಧ್ಯಕ್ಷರು : ಅದು ಸಭಾಧ್ಯಕ್ಷರ ಅಧೀನಕ್ಕೆ ಬರುತ್ತದೆ. ಅದು ನಿಮ್ಮ ಕ್ಷೇತ್ರಕ್ಕೆ ಬರುತ್ತದೆಂದು ನೀವು ಹೇಗೆ ಹೇಳುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಕೊಡಗು ಜಿಲ್ಲೆಯ ವಿಷಯವನ್ನು Zero Hour ನಲ್ಲಿ ಪ್ರಸ್ತಾಪಿಸಲು ಕಳೆದ 3-4 ದಿವಸಗಳಿಂದ ನಾನು ನೋಟೀಸ್ ಕೊಡುತ್ತಿದ್ದೇನೆ. ಆದರೂ ಸಹಾ ನೀವು ಅದನ್ನು ಪ್ರಸ್ತಾಪಿಸಲು ನನಗೆ ಅವಕಾಶ ಕೊಟ್ಟಿಲ್ಲ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ದಯವಿಟ್ಟು ಪ್ರಸ್ತಾಪಿಸಲು ಒಂದು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಅವಕಾಶ ಕೊಡುತ್ತಿದ್ದೇನೆ.

3. ವಿಷಯ : ಕೊಡಗು ಜಿಲ್ಲೆಯ ಜಮಾ ಮತ್ತು ಬಾಣೆ ಸಾಗುವಳಿದಾರರಿಗೆ ಹಕ್ಕು ನೀಡುವ ಬಗ್ಗೆ ಅಮೆಂಡ್‌ಮೆಂಟ್ ಬಿಲ್‌ವೊಂದನ್ನು ತರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಕೊಡಗು ಜಿಲ್ಲೆಯ ಜಮ್ಮಾ ಮತ್ತು ಬಾಣೆ ಬಗ್ಗೆ ಬಿಲ್‌ವೊಂದನ್ನು ತರಬೇಕೆಂದು ಸಚಿವ ಸಂಪುಟದಲ್ಲಿ ನಿರ್ಣಯವಾಗಿದೆ ಎಂದು ನಾನು